ಶಾಖೆ / ವಿಷಯ : DEPARTMENT / SUBJECT: ಶಿಕ್ಷಣ

ಪತ್ರಿಕೆಯ ಹೆಸರು : NAME OF THE NEWS PAPER: [illegible]

ದಿನಾಂಕ : DATE : 30/9/2020

ಸದ್ಯಕ್ಕೆ ಬೇಡ

# ಶಾಲೆ ಆರಂಭಿಸಲು ಶಾಸಕರುಗಳಿಂದಲೇ ವಿರೋಧ

## ಶಾಲೆಗಳ ಆರಂಭ ಸದ್ಯಕ್ಕೆ ಬೇಡ

ಹುಬ್ಬಳ್ಳಿ: ಶಾಲೆಗಳ ಆರಂಭದ ಬಗ್ಗೆ ಪಾಲಕರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಕೆಲವರು ಶಾಲೆಗಳು ಆರಂಭವಾಗಲಿ ಎಂದರೆ, ಇನ್ನು ಕೆಲವರು ಶಾಲೆ ತೆರೆಯುವುದು



ಬೇಡ ಎನ್ನುತ್ತಿದ್ದಾರೆ ಎಂದು ಸಚಿವ ಜಗದೀಶ್ ಶೆಟ್ಟರ್ ಹೇಳಿದ್ದಾರೆ. 'ಶಾಲೆಗಳನ್ನು ತೆರೆಯುವಂತೆ ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡವಿದೆ. ಹೀಗಾಗಿ ಮೊದಲ ಹಂತದಲ್ಲಿ ಮೂರ್ನಾಲ್ಕು ಶಾಲೆಗಳನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಿ. ಇದರ ಸಾಧಕ-ಬಾಧಕಗಳನ್ನು ನೋಡಿಕೊಂಡ ನಂತರ ಇತರೆ ಶಾಲೆಗಳನ್ನು ಪ್ರಾರಂಭಿಸಬಹುದು' ಎಂದಿದ್ದಾರೆ.

## ಸಮಸ್ಯೆ ಉಂಟಾದರೆ ಸರ್ಕಾರವೇ ಹೊಣೆ

ಬೆಂಗಳೂರು: ಕೇವಲ ಆರು ದಿನಗಳ ಕಾಲ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿಯೇ ಸಚಿವರು ಹಾಗೂ ಶಾಸಕರಿಗೆ ಸೋಂಕು ತಗಲದಂತೆ ನೋಡಿಕೊಳ್ಳುವಲ್ಲಿ



ವಿಫಲವಾಗಿರುವ ರಾಜ್ಯ ಸರ್ಕಾರ, ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಾಯಕ್ಕೆ ಮಣಿದು ಶಾಲೆಗಳನ್ನು ಪುನಾರಂಭಿಸಲು ಮುಂದಾಗಿದೆ ಎಂಬ ಸಂಶಯ ವ್ಯಕ್ತವಾಗಿದೆ. ಒಂದು ವೇಳೆ ಮಗುವಿಗೆ ತೊಂದರೆಯಾದರೂ ಅದಕ್ಕೆ ಶಿಕ್ಷಣ ಸಚಿವರು ಹಾಗೂ ಸರ್ಕಾರ ಹೊಣೆಯಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ರಘು ಆಚಾರ್ ಹೇಳಿದ್ದಾರೆ.

## ದೊಡ್ಡವರೇ ಮಾಸ್ಕ್ ಹಾಕಿಕೊಳ್ಳುತ್ತಿಲ್ಲ

ಬಳ್ಳಾರಿ: ಎಲ್ಲ ಶಾಸಕರು ಸೇರಿದಂತೆ ಶಿಕ್ಷಣ ತಜ್ಞರ ಜತೆ ಸುರೇಶ್ ಕುಮಾರ್ ಅವರು ಸಮಾಲೋಚನೆ ನಡೆಸುತ್ತಿದ್ದಾರೆ. ಸ್ಕೂಲ್‌ಗಳನ್ನು ಆರಂಭಿಸಿ, ಪ್ರಾಥ



ಮಿಕ ಹಂತದ ಶಾಲೆಗಳನ್ನು ಸದ್ಯಕ್ಕೆ ತೆರೆಯುವುದು ಬೇಡ ಎಂದು ಸಲಹೆ ನೀಡಿದ್ದೇನೆ' ಎಂದು ಅರಣ್ಯ ಸಚಿವ ಆನಂದ್ ಸಿಂಗ್ ಹೇಳಿದ್ದಾರೆ. 'ದೊಡ್ಡವರೇ ಮಾಸ್ಕ್ ಹಾಕುತ್ತಿಲ್ಲ, ಸಾಮಾಜಿಕ ಅಂತರ ಕಾಯ್ದುಕೊಳ್ಳುತ್ತಿಲ್ಲ. ಹೀಗಿರುವಾಗ ಪುಟ್ಟ ಮಕ್ಕಳು ಹೇಗೆ ನಿಭಾಯಿಸುತ್ತಾರೆ' ಎಂದಿದ್ದಾರೆ.

## ಆರಂಭಿಸುವ ಮುನ್ನ ಮುನ್ನೆಚ್ಚರಿಕೆ ಅಗತ್ಯ

ಬೆಂಗಳೂರು: ರಾಜ್ಯದಲ್ಲಿ ಶಾಲೆಗಳನ್ನು ಯಾವಾಗ ಆರಂಭಿಸುತ್ತೀರಿ ಎಂದು ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಆದರೆ ಅದಕ್ಕೂ ಮುನ್ನ ಮುನ್ನೆಚ್ಚರಿಕೆ ಕ್ರಮ



ಗಳನ್ನು ಕೈಗೊಳ್ಳುವುದು ಅತ್ಯಗತ್ಯ. ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಲೇಬೇಕಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ. 'ಹೋದಲ್ಲೆಲ್ಲಾ ಶಾಲೆ ಯಾವಾಗ ತೆರೆಯುತ್ತೀರಿ ಎಂದು ಮಕ್ಕಳು ಕೇಳುತ್ತಿರುವುದರಿಂದ ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಶಾಲೆ ತೆರೆಯುವ ಯೋಚನೆ ಮಾಡಬೇಕು' ಎಂದು ತಿಳಿಸಿದ್ದಾರೆ.

## ಸದ್ಯ ಆನ್‌ಲೈನ್ ಕ್ಲಾಸ್ ಮಾತ್ರ ಸಾಕು

ಶಿವಮೊಗ್ಗ: ಈ ವರ್ಷ ಶಾಲೆಗಳನ್ನು ಆರಂಭಿಸುವುದು ಬೇಡವೇ ಬೇಡ. ವಿದ್ಯಾರ್ಥಿಗಳ ಸುರಕ್ಷಾ ದೃಷ್ಟಿಯಿಂದ ಇದೊಂದು ವರ್ಷ ಆನ್‌ಲೈನ್‌ನಲ್ಲೇ ತರಗತಿಗಳನ್ನು ಮಾಡಲಿ



ಎಂದು ಸಿಎಂ ಯಡಿಯೂರಪ್ಪ ಪುತ್ರ, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಸಲಹೆ ನೀಡಿದ್ದಾರೆ. ವರ್ಷವಿಡೀ ಮಕ್ಕಳಿಗೆ ಆನ್‌ಲೈನ್‌ನಲ್ಲಿ ಕ್ಲಾಸ್ ನಡೆಸಿ, ಬೇಕಿದ್ದರೆ ಪರೀಕ್ಷೆ ಸಮಯದಲ್ಲಿ ಮಕ್ಕಳನ್ನು ಶಾಲೆಗೆ ಕರೆಸಿ ಪರೀಕ್ಷೆಗಳನ್ನು ಕೊಠಡಿಗಳಲ್ಲಿ ನಡೆಸಲಿ. ಸದ್ಯದ ಪರಿಸ್ಥಿತಿಯಲ್ಲಿ ಆನ್‌ಲೈನ್ ವ್ಯವಸ್ಥೆಯೇ ಸೂಕ್ತ ಎಂದು ಹೇಳಿದ್ದಾರೆ.